ನಕ್ಕಾಗ ಶಾಟ್ ಪುಟ್ ಗುಂಡು ಮುಖಕ್ಕೆ ಬಡಿದು ಅಪ್ಪಚ್ಚಿಯಾದಂತೆನಿಸಿತು. ಥಟ್ಟನೆ ಮುಖ ಮುಟ್ಟಿ ನೋಡಿಕೊಳ್ಳಬೇಕೆನಿಸಿ ಗಡ್ಡ ಸವರಿಕೊಳ್ಳುವವನಂತೆ ಮುಖದ ಮೇಲೊಮ್ಮೆ ಕೈಯಾಡಿಸಿಕೊಂಡ. ಅದೇ ಹೊತ್ತಿಗೆ ಮಹಿಮಾ ರಮೇಶ್ ಪಕ್ಕದ ಬಾಗಿಲಿಂದ ಒಳ ಬರುತ್ತ, 'ಹಾಯ್ ರಮಣಿ, ನಿಮ್ಮ ಕವಿತೆ ತುಂಬಾ ಇಷ್ಟ ಆಯಿತು. ನೀವು ಓದುತ್ತಿರುವಾಗ ಬಂದೆ. ಬಾಗಿಲಾಚೆಯೆ ನಿಂತು ಕೇಳಿದೆ'. ಅಂದವಳೇ ಅವಳನ್ನು ತಬ್ಬಿಕೊಂಡು ಅವಳ ಪಕ್ಕದ ಸೀಟಲ್ಲಿ ಕುಳಿತಳು. ಎರಡನೆಯ ಸೆಷನ್ ಮುಗಿದು ಹತ್ತು ನಿಮಿಷಗಳ ಚಹಾ ವಿರಾಮವಾದ್ದರಿಂದ ಅಕ್ಕಪಕ್ಕದವರು ಪರಸ್ಪರ ಹಾಯ್ ಹೇಳಿಕೊಳ್ಳಲಾರಂಭಿಸಿದರು. ಮಹಿಮಾ ರಮೇಶ್, ಲೋಹಿತೇಶ್ವರನನ್ನು ಅದಾಗಷ್ಟೇ ಗಮನಿಸಿದಂತೆ ವಿಶ್ ಮಾಡಿದಳು. ಮುಂದಿನ ಸೆಷನ್ ನಮ್ಮದೇ ಅಂದ. ರಮಣಿ ಅಭಿನಂದಿಸುವಂತೆ ಮಹಿಮಾಳ ಕೈ ಕುಲುಕಿದಳು.

ಮಹಿಮಾ ರಮೇಶ್ ಒಂದು ಕಾಲದಲ್ಲಿ ಲೋಹಿತೇಶ್ವರ ಶೋಧಿಸಿದ ಪ್ರತಿಭೆ ಎಂದೇ ಹೆಮ್ಮೆಯಿಂದ ಗುರುತಿಸಲ್ಪಟ್ಟವಳು. ಸಾಹಿತ್ಯಿಕ ಕಾರ್ಯಕ್ರಮವೊಂದರ ವರದಿ ಬರೆದುಕೊಳ್ಳಲು ಹೋಗಿದ್ದಾಗ ರಮಣಿ, ಮಹಿಮಾಳನ್ನು ಮೊದಲು ನೇರವಾಗಿ ಕಂಡಿದ್ದು. ಮಹಿಮಾ ವೇದಿಕೆಯಲ್ಲಿ ಮಾತಾಡುತ್ತಿದ್ದರೆ ರಮಣಿ ಆ ಕಾರ್ಯಕ್ರಮದ ವರದಿ ಬರೆದುಕೊಳ್ಳಲು ಬಂದಿದ್ದಳು. ಮರುದಿನ ಅವಳು ಮಹಿಮಾಳ ಮಾತುಗಳ ಪ್ರಖರತೆಗೆ ಕುಂದು ಬರುವಂತೆ ವರದಿ ಬರೆದಿದ್ದಾಳೆಂದು ಲೋಹಿತೇಶ್ವರನೇ 'ಕನ್ನಡನುಡಿ' ಪತ್ರಿಕೆಯ ಬಗ್ಗೆ ತನ್ನ 'ಉಗಮ' ಪತ್ರಿಕೆಯಲ್ಲಿ ಕಟಕಿಯಾಡಿದ್ದ. ಮೊದಲಿನಂತಾಗಿದ್ದರೆ ಇಷ್ಟು ಹೊತ್ತಿಗೆ ರಮಣಿ ಆ ಜಾಗದಿಂದ ಹೊರಟಿರುತ್ತಿದ್ದಳು... ಆರಕ್ಕೇರದ ಮೂರಕ್ಕಿಳಿಯದ ನಮೂನೆಯವವಳು ರಮಣಿ. ಅದು ಅವಳಾಗಿ ರೂಢಿಸಿಕೊಂಡಿದ್ದೋ... ಅವಳ ವ್ಯಕ್ತಿತ್ವವೇ ಹಾಗೋ... ಬದುಕು ಅವಳನ್ನಿಟ್ಟದ್ದೇ ಹಾಗೋ ಹುಡುಕಲು ಹೊರಟರೆ ಇದು ಇದೇ ಎಂಬಂತ ಉತ್ತರ ಅವಳಿಗೂ ಸಿಗಲಾರದೇನೋ. ಉತ್ತರ ಹುಡುಕಹೊರಟು ಕಂಡು ಹಿಡಿಯಲಾಗದ ಅಸಹನೆಯ ಹಿತಶತ್ರುಗಳ ಕಣ್ಣುಗಳಲ್ಲಿ ಅವಳ ನಿರಂತರತೆಯ ಗುರುತು, "ಒಮ್ಮೆ ಹೇಗೋ ಆರಕ್ಕೇರಿದರೆ ಮೂರಕ್ಕಿಳಿಯಲೇಬೇಕಾದೀತೆನ್ನುವ ಭಯದಿಂದ ಆರಕ್ಕೇರುವ ಧೈರ್ಯವಿಲ್ಲದವಳು". ಈ ಗುರುತು ತನಗೆ ಹಚ್ಚಿರುವುದರ ಹಿಂದಿನ ಹೊಗೆ ಯಾವ ಮೂಲದ್ದೆಂಬ ಅರಿವೂ ಅವಳಿಗೀಗ ಇದೆ. ಕೆಲವೊಮ್ಮೆ ಅವಳಿಗೆ ಅರ್ಥವಾಗಿಯೂ ಆಗದಂತಿರುವುದು ಈ ಹೊಗೆಕಾರರಿಗೆ ಒಳಗೊಳಗೆ ತನ್ನ ಬರಹದ ಬಗ್ಗೆ ಇರುವ ಅಸೂಯೆ ತುಂಬಿದ ಮೆಚ್ಚುಗೆ ಪ್ರೀತಿ.

ಒಂದು ಕೆಟ್ಟ ಮಾತು... ಕೆಟ್ಟ ನೋಟ... ದಿನವಿಡೀ ಹಿಂಸೆ ನೀಡುತ್ತಿದ್ದ... ಇದನ್ನೆಲ್ಲ ಬಿಟ್ಟು ದೂರ ನಡೆದುಬಿಡಬೇಕು ಅನಿಸುವಷ್ಟು ರೋಸಿ ಹೋಗಿ ನಿದ್ರೆ ಇಲ್ಲದೆ ಹೊರಳಾಡಿ... ಬೆಳಗಾಗುವ ಹೊತ್ತಿಗೆ ಎಲ್ಲಿಗೆ ಹೋಗುವುದೆಂದು ತಿಳಿಯದೆ ಮತ್ತದೇ ಜಗತ್ತಿಗೆ ಕಾಲೆಳೆಯುತ್ತಿದ್ದ ದಿನಗಳು ಇಂದಿಗೂ ಹಸಿರಾಗಿಯೇ ಇದೆ. ಈಗಲೂ ಹಿಂಸೆ ಹಾಗೆಯೇ ಇದೆ. ಅವಳು ಹಿಂಸೆಯ ಆಯಾಮಗಳನ್ನು ವಿಶ್ಲೇಷಿಸುತ್ತಾಳೆ... ಹಿಂಸ್ರ ಪಶುಗಳ ಪ್ರಯತ್ನಗಳನ್ನು ನಿಸ್ಸಾರಗೊಳಿಸಿದಾಗ ಒಂದು ಬಾಂಬು ನಿಷ್ಕ್ರಿಯಗೊಳಿಸಿದಂತಹ ನಿರಾಳತೆಯನ್ನನುಭವಿಸುತ್ತಾಳೆ. ಹೀಗೆ ಮಾಡುತ್ತಾ ಮಾಡುತ್ತಾ ಅವಳು ಒಂದು ವಯೋಮಾನದ ಹೆಣ್ಣು ಮಕ್ಕಳಿಗೆ ಆಪ್ತ ಸಮಾಲೋಚಕಿ ಆಗಿ ಬಿಟ್ಟದ್ದಳು. ಈಗವಳಿಗೆ ಕಳೆದ ದಿನಗಳ ಮೆಲುಕು ಕೂಡ ಹಿಂಸೆ ಕೊಡುವುದೇ ಇಲ್ಲ.

ಕವಿ, ಕಾವ್ಯಕ್ಕೆ ಸಂಬಂಧಿಸಿದಂತೆ ಕಾವ್ಯ ಒಳಮೈ, ಹೊರಮೈ, ಒಳಹೊರಮೈ ಎಂಬ ಹೊಸ ಪರಿಕಲ್ಪನೆಯಲ್ಲಿ ವಿಮರ್ಶಾತ್ಮಕವಾದ ಎರಡು ದಿನಗಳ ಸಂಕಿರಣವೊಂದು ನಗರದಲ್ಲಿ ಆಯೋಜನೆ ಆಗುತ್ತಿರುವ ಬಗ್ಗೆ ಅವಳಿಗೆ ಮಾಹಿತಿ ಸಿಕ್ಕಿದ್ದರೂ; ಅದರ ವಿವರಗಳು ತಲುಪಿದ್ದು ನಾಲ್ಕು ದಿನಗಳ ನಂತರವೇ. ಕವಿ ಕಾವ್ಯ ಸಂವಹನದಲ್ಲಿ ಭಾಗವಹಿಸಲು ಕರೆ ಬಂದಿತ್ತು. ಈ ಪರಿಕಲ್ಪನೆಯ ಹಿಂದಿರುವುದು ಲೋಹಿತೇಶ್ವರನೆಂಬ ಮಾಹಿತಿ ಇದ್ದಿದ್ದರಿಂದ ಕರೆ ಬಂದಾಗ ಅಚ್ಚರಿಯಾಗಿತ್ತು. ತನ್ನ ಹೆಸರು ಸೂಚಿಸಿದ್ದೂ ಅವನೆಂದು ತಿಳಿದಾಗ ತಬ್ಬಿಬ್ಬಾಗಿದ್ದಳು. ಪ್ರಖರ ಪ್ರತಿಭೆಯ ತೀವ್ರ ಸಂವೇದನೆಯ ಕವಿ, ಕವಯತ್ರಿಯರ ಅದರಲ್ಲೂ ಔದ್ಯೋಗಿಕವಾಗಿಯೂ ಅಕಡೆಮಿಕ್